

# ಸರಿಯಾದ ಪಾಲು

■ ಟಿ.ಆರ್. ಉಷಾರಾಣಿ
ಕಲೆ: ಸಂತೋಷ್ ಸಸಿಹಿತ್ಲು

ಒಂದು ಹಳ್ಳಿಯಲ್ಲಿ ರಾಮಪ್ಪ ಎಂಬ ಒಬ್ಬ ವ್ಯಕ್ತಿ ಇದ್ದನು. ಅವನ ಬಳಿ 19 ಹಸುಗಳಿದ್ದವು. ಅವನಿಗೆ ತುಂಬಾ ಕಾಯಿಲೆಯಾಗಿ ಒಂದು ದಿನ ಮರಣ ಹೊಂದಿದನು. ಸಾಯುವ ಮೊದಲು ಒಂದು ಪತ್ರವನ್ನು ಬರೆಸಿ ಅದನ್ನು ತನ್ನ ದಿಂಬಿನ ಕೆಳಗೆ ಇಟ್ಟುಕೊಂಡಿದ್ದನು. ಅವನ ಮರಣದ ನಂತರ ಅವನು ಬರೆಸಿದ್ದ ಪತ್ರವನ್ನು ಊರಿನ ಪಂಚಾಯ್ತಿಯಲ್ಲಿ ಓದಲಾಯಿತು. ಅದರಲ್ಲಿ ಹೀಗೆ ಬರೆಸಲಾಗಿತ್ತು: ‘ನನ್ನ ಬಳಿ 19 ಹಸುಗಳಿವೆ ಅವುಗಳಲ್ಲಿ ಅರ್ಧದಷ್ಟು ಹಸುಗಳನ್ನು ನನ್ನ ಮಗನಿಗೆ ನೀಡಬೇಕು. 19 ಹಸುಗಳಲ್ಲಿ, ನಾಲ್ಕನೇ ಒಂದು ಭಾಗವನ್ನು ನನ್ನ ಮಗಳಿಗೆ ನೀಡಬೇಕು. 19 ಹಸುಗಳಲ್ಲಿ ಐದನೇ ಒಂದು ಭಾಗವನ್ನು ನನ್ನ ಸೇವಕನಿಗೆ ನೀಡಬೇಕು. ಈ ವಿಭಜನೆ ಹೇಗೆ ಆಗಬೇಕು? ಎಲ್ಲರೂ ಗೊಂದಲಕ್ಕೊಳಗಾಗಿದ್ದರು.

19 ಹಸುಗಳಲ್ಲಿ ಅರ್ಧದಷ್ಟು, ಅಂದರೆ 9.5 ರಷ್ಟು ಹಸುಗಳನ್ನು ಮಗನಿಗೆ ಕೊಡಬೇಕು ಅಂದರೆ ಒಂದು ಹಸುವನ್ನು ಕತ್ತರಿಸಬೇಕಾಗುತ್ತದೆ! 19 ಹಸುಗಳಲ್ಲಿ ನಾಲ್ಕನೇ ಒಂದು ಭಾಗ ಅಂದರೆ 4.75 ಹಸುಗಳನ್ನು ಮಗಳಿಗೆ ಕೊಡಬೇಕು ಅಂದರೆ ಮತ್ತೊಂದು ಹಸುವನ್ನು ಕತ್ತರಿಸಬೇಕಾಗುತ್ತದೆ! 19 ಹಸುಗಳಲ್ಲಿ ಐದನೇ ಒಂದು ಭಾಗ ಅಂದರೆ 3.80ರಷ್ಟು ಹಸುಗಳನ್ನು ಸೇವಕನಿಗೆ ನೀಡಬೇಕು ಅಂದರೆ ಮಗದೊಂದು ಹಸುವನ್ನು ಕತ್ತರಿಸಬೇಕಾಗುತ್ತದೆ! ಎಲ್ಲರೂ ತುಂಬಾ ಗೊಂದಲದಲ್ಲಿದ್ದರು. ಹೇಗೆ ಲೆಕ್ಕ ಮಾಡಿದರೂ ಅವನ ಪತ್ರದಂತೆ ಪಾಲು ಮಾಡುವುದು ಸಾಧ್ಯವಿರಲಿಲ್ಲ. ಪ್ರಾಣಿಹತ್ಯೆಯನ್ನು ಮಾಡುವುದಕ್ಕೆ ಯಾರೂ ಒಪ್ಪಲಿಲ್ಲ. ಜೀವಂತವಾಗಿಯೇ ಪಾಲು ಮಾಡಬೇಕೆಂಬುದು ಕೂಡ ರಾಮಪ್ಪನ ಪತ್ರದಲ್ಲಿತ್ತು. ಪರಿಹಾರವನ್ನು ತಿಳಿಯುವ ಮೊದಲು ಮಕ್ಕಳೇ ಸ್ವಲ್ಪ ಯೋಚಿಸಿ. ನಂತರ ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಿದರೆಂದು ತಿಳಿದುಕೊಳ್ಳಿ. ನಿಮಗೆ ಹೊಳೆದ ಪರಿಹಾರ ಮತ್ತು ಇದರಲ್ಲಿ ನೀಡಿರುವ ಪರಿಹಾರ ಒಂದೇ ಆದರೆ ನಿಮ್ಮ ಅಪ್ಪ–ಅಮ್ಮನಿಂದ ನೀವೂ ಉಡುಗೊರೆಯನ್ನು ಪಡೆಯಿರಿ.

**ಸಮಸ್ಯೆಗೆ ಪರಿಹಾರ**

ಆಗ ಪಕ್ಕದ ಹಳ್ಳಿಯಿಂದ ಒಬ್ಬ ಬುದ್ಧಿವಂತನನ್ನು ಕರೆಸಲಾಯಿತು. ಅವನ ಹೆಸರು ಕೃಷ್ಣ ಎಂದು. ಕೃಷ್ಣ ತನ್ನ ಹಸುವಿನೊಂದಿಗೆ ಬಂದು, ಸಮಸ್ಯೆಯನ್ನು ಆಲಿಸಿದನು. ತನ್ನ ಮನಸ್ಸಿನಲ್ಲೇ ಲೆಕ್ಕಾಚಾರ ಮಾಡಿಕೊಂಡು ನಂತರ, ಈ 19 ಹಸುಗಳ ನಡುವೆ ನನ್ನ ಹಸುವನ್ನು ಸೇರಿಸಿ ಹಂಚಿರಿ ಎಂದನು. ಎಲ್ಲರೂ ಇಲ್ಲೊಬ್ಬ ವಿಚಿತ್ರ ವ್ಯಕ್ತಿ ಬಂದಿದ್ದಾನೆ, ತನ್ನ ಹಸುವನ್ನು ಇವರ ನಡುವೆ ಹಂಚಬೇಕು ಎಂದು ಹೇಳುವ ಇವನೊಬ್ಬ ಹುಚ್ಚ ಎಂದು ಭಾವಿಸಿದರು. ಆದರೂ ವಿಷಯವನ್ನು ಒಪ್ಪಿಕೊಳ್ಳುವುದರಿಂದ ಏನು ತೊಂದರೆ ಎಂದು ಎಲ್ಲರೂ ಯೋಚಿಸಿದರು. 19+1= 20 ಹಸುಗಳಾದವು. 20ರ ಅರ್ಧದಷ್ಟು 10 ಹಸುಗಳನ್ನು ಮಗನಿಗೆ ನೀಡಿದರು. 20ರಲ್ಲಿ ನಾಲ್ಕನೇ ಒಂದು ಭಾಗ ಅಂದರೆ 5 ಹಸುಗಳನ್ನು ಮಗಳಿಗೆ ನೀಡಿದರು. 20ರಲ್ಲಿ ಐದನೇ ಒಂದು ಭಾಗ ಅಂದರೆ 4 ಹಸುಗಳನ್ನು ಸೇವಕನಿಗೆ ನೀಡಿದರು. ಅಲ್ಲಿಗೆ 10+5+4= 19 ಹಸುಗಳಾದವು. ಅಲ್ಲಿ ಈಗ ಒಂದು ಹಸು ಉಳಿದಿದೆ, ಅದು ಆ ಬುದ್ಧಿವಂತ ವ್ಯಕ್ತಿ ಕೃಷ್ಣನಿಗೆ ಸೇರಿದ್ದು. ಅವನು ತನ್ನ ಹಸುವನ್ನು ಮರಳಿ ಪಡೆದನು. ಇಷ್ಟು ಸುಲಭವಾಗಿ ಸಮಸ್ಯೆಯನ್ನು ಪರಿಹಾರ ಮಾಡಿದ ಕೃಷ್ಣನಿಗೆ ಸೂಕ್ತ ಉಡುಗೊರೆಯನ್ನು ನೀಡಲಾಯಿತು. ಅವನು ತನ್ನ ಹಳ್ಳಿಗೆ ಸಂತೋಷದಿಂದ ಹಿಂತಿರುಗಿದ. ಹೀಗೆ 1 ಹಸುವನ್ನು 19 ಹಸುಗಳ ಜೊತೆಯಲ್ಲಿ ಸೇರಿಸಿ ಯಾವುದೇ ಹಸುವನ್ನು ಕತ್ತರಿಸದೇ ರಾಮಪ್ಪನ ಇಚ್ಛೆಯಂತೆಯೇ ಹಸುಗಳನ್ನು ಹಂಚಲಾಯಿತು.

(ಸಂಗ್ರಹ)